# ಹಲಸು ಬೆಳೆಯ ಸುಧಾರಿತ ಬೇಸಾಯ ಕ್ರಮಗಳು

ನಮ್ಮ ದೇಶ ಹಲಸಿನ ಮೂಲವಾಗಿದ್ದು, ಹಣ್ಣನ್ನು ನೇರ ಸೇವನೆಗೆ ಮತ್ತು ಕಾಯಿಗಳನ್ನು ಅಡುಗೆಗೆ ಉಪಯೋಗಿಸುತ್ತಾರೆ. ಹಲಸಿನಲ್ಲಿ ಸಕ್ಕರೆ ಮತ್ತು ಅನ್ನಾಂಗಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಬೀಜದಲ್ಲಿ ಸಾರಜನಕ, ಪಿಷ್ಟ ಮತ್ತು ಖನಿಜಾಂಶಗಳಿವೆ. ಇದು ಮಲೆನಾಡು ಮತ್ತು ಕರಾವಳಿ ಪ್ರದೇಶಗಳಿಗೆ ಸೂಕ್ತವಾಗಿದ್ದು, ಇನ್ನುಳಿದ ಪ್ರದೇಶಗಳಲ್ಲಿ ಕೂಡ ಸಾಧಾರಣವಾಗಿ ಬರುತ್ತದೆ. ಹಲಸು ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ವಾಣಿಜ್ಯ ಬೆಳೆಯಾಗಿದ್ದು, ಜಿಲ್ಲೆಯಾದ್ಯಂತ ಸುಮಾರು 785 ಹೆಕ್ಟೇರು ಪ್ರದೇಶದಲ್ಲಿ ಬೆಳೆಯುತ್ತಿದ್ದು ಕೃಷಿಕರ ಆರ್ಥಿಕ ಮತ್ತು ಸಾಮಾಜಿಕ ಸುಭದ್ರತೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

**ಮಣ್ಣು:** ಆಳವಾದ ಕೆಂಪುಗೋಡು ಮಣ್ಣು ಮತ್ತು ಮರಳು ಮಿಶ್ರಿತ ಫಲವತ್ತಾದ ಮಣ್ಣು ಈ ಬೆಳೆಗೆ ಸೂಕ್ತ.

**ಹವಾಗುಣ ಮತ್ತು ನಾಟಿ ಕಾಲ:** ತೇವಾಂಶವುಳ್ಳ ಉಷ್ಣವಲಯದಲ್ಲಿ 1500 ಮೀ. ಎತ್ತರದವರೆಗೂ ಈ ಹಣ್ಣನ್ನು ಬೆಳೆಯಬಹುದು. ಜೂನ್– ಜುಲೈ ತಿಂಗಳುಗಳು ನಾಟಿಗೆ ಸೂಕ್ತ.

**ತಳಿಗಳು: ದಕ್ಷಿಣ ಒಣ ಪ್ರದೇಶ**

1. **ಸಿಂಗಪೂರ ಹಲಸು (ಸಿಲೋನ ಹಲಸು)** : ಒಂದು ಒಳ್ಳೆಯ ತಳಿಯಾಗಿದ್ದು ಬೇಗನೆ ಫಲ ಕೊಡುತ್ತದೆ. ಹಣ್ಣುಗಳು ಮಧ್ಯಮ ಗಾತ್ರದ್ದಾಗಿವೆ.
2. **ಸ್ವರ್ಣ** : ಈ ತಳಿಯನ್ನು ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರಿಂದ ಬಿಡುಗಡೆ ಮಾಡಲಾಗಿದೆ. ಈ ತಳಿಯು 2–3 ಕಾಯಿಗಳ ಗೊಂಚಲನ್ನು ಮುಖ್ಯ ಬುಡದ ಹಾಗೂ ರೆಂಬೆಗಳ ಮೇಲೆ ಬರುವುದರಿಂದ ಉತ್ತಮ ಇಳುವರಿ ನೀಡುತ್ತದೆ. ಕಾಯಿಯ ಸರಾಸರಿ 6–8 ಕಿ.ಗ್ರಾಂ. ತೂಕವಿದ್ದು ಸ್ವರ್ಣ ಹಳದಿ ಬಣ್ಣದಿಂದ ಕೂಡಿರುತ್ತದೆ.
3. **ಪಾಲೂರು – 1** : ಇದು ತಮಿಳುನಾಡು ಕೃ.ವಿ.ವಿ.ಯಿಂದ ಬಿಡುಗದೆ ಮಾಡಲಾಗಿದ್ದು ಅಧಿಕ ಇಳುವರಿ ನೀಡುತ್ತದೆ. (900 ಕಿ.ಗ್ರಾಂ/80ಹಣ್ಣುಗಳು) ಹಾಗೂ ವರ್ಷಕ್ಕೆ ಎರಡು ಬಾರಿ ಹಣ್ಣು ಕೊಡುತ್ತದೆ. (ಮಾರ್ಚ್–ಜೂನ್ ಮತ್ತು ಅಕ್ಟೋಬರ್–ಡಿಸೆಂಬರ್)
4. **ಪೆಚಿಪರಾಯ – 1** : ಇದು ಸಹ ತಮಿಳುನಾಡು ಕೃ.ವಿ.ವಿ.ಯಿಂದ ಬಿಡುಗದೆ ಮಾಡಲಾಗಿದ್ದು ಪ್ರತಿ ಮರದಿಂದ ಸುಮಾರು 17 ಕಿ.ಗ್ರಾಂ ತೂಕವುಳ್ಳ 100 ರಿಂದ 150 ಕಾಯಿಗಳು ದೊರೆಯುತ್ತದೆ. ಇದು ಸಹ ವರ್ಷಕ್ಕೆ ಎರಡು ಫಸಲು ನೀಡುತ್ತದೆ.
5. **ಕೊಂಕಣ್ ಪ್ರಾಲಿಫಿಕ್** : ಕೊಂಕಣ್ ಕೃಷಿ ವಿದ್ಯಾಪೀಠ, ದಾಪೋಲಿ, ಮಹಾರಾಷ್ಟ್ರದ, ಹಣ್ಣು ಸಂಶೋಧನಾ ಕೇಂದ್ರದಿಂದ ಬಿಡುಗಡೆಯಾಗಿರುವ ಈ ತಳಿಯು, ಅಧಿಕ ಇಳುವರಿ (450–550) ಕಿ.ಗ್ರಾಂ/ಮರಕ್ಕೆ) ನೀಡುತ್ತದೆ ಮತ್ತು ಹಣ್ಣಿನ ಗಾತ್ರ 5.70 ಕಿ.ಗ್ರಾಂ ನೀಡುತ್ತದೆ.

6. ಇತರ ಸ್ಥಳಿಯ ತಳಿಗಳಾದ ಚಂದ್ರಹಲಸು, ರುದ್ರಾಕ್ಷಿ, ಜಾಣಗೆರೆ, ಲಾಲಬಾಗ್ ಮಧುರ, ಸಿದ್ದು, ತೂಬಗೆರೆ ಸೆಲೆಕ್ಷನ್, ಗಮ್‌ಲೆಸ್ (ಅಂಟು ರಹಿತ) ಮುಂತಾದವುಗಳನ್ನು ಕೂಡಾ ಈ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇತ್ತೀಚೆಗೆ ಕಸಿಮಾಡಿದ ಉತ್ತಮ ಜಾತಿಯ ಗಿಡಗಳು ಬೇಗನೆ ಫಲ ನೀಡುವ ಗುಣ ಹೊಂದಿವೆ.

**ಬೇಸಾಯ ಸಾಮಾಗ್ರಿಗಳು**

| | |
|---|---|
| ಅಂತರ (ಅಡಿ) : 30 x 30 | 40 ಕಸಿಗಿಡಗಳು/ಎಕರೆಗೆ |
| ಕೊಟ್ಟಿಗೆ/ ಕಾಂಪೋಸ್ಟ್ ಗೊಬ್ಬರ | 50 ಕಿ.ಗ್ರಾಂ./ಗಿಡಕ್ಕೆ, 2 ಟನ್/ಎಕರೆ |

| **ರಾಸಾಯನಿಕ ಗೊಬ್ಬರಗಳು:** | **ಗ್ರಾಂ./ಗಿಡಕ್ಕೆ** | | | **ಕಿ.ಗ್ರಾಂ./ಎಕರೆ** | | |
|---|---|---|---|---|---|---|
| **ವರ್ಷಗಳು** | **ಸಾರಜನಕ** | **ರಂಜಕ** | **ಪೊಟ್ಯಾಷ್** | **ಸಾರಜನಕ** | **ರಂಜಕ** | **ಪೊಟ್ಯಾಷ್** |
| 1-3 | 200 | 120 | 60 | 8 | 4.8 | 2.4 |
| 4-7 ವರ್ಷದ ಗಿಡಗಳಿಗೆ ಮೊದಲ ವರ್ಷದ ಎರಡು ಪಟ್ಟು | | | | | | |
| 7 ವರ್ಷಕ್ಕೆ ಮೇಲ್ಪಟ್ಟ ಗಿಡಗಳಿಗೆ | 600 | 300 | 180 | 24 | 12 | 7.2 |

**ನಾಟಿ ಮಾಡುವುದು:** ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಸಿದ್ಧಪಡಿಸಿಕೊಳ್ಳಬೇಕು. ಮೂರು ಘನ ಅಡಿ ಆಳತೆಯ ಗುಣಿಗಳನ್ನು ಏಪ್ರಿಲ್–ಮೇ ತಿಂಗಳಲ್ಲಿ ಶಿಫಾರಸ್ಸು ಮಾಡಿದ ಅಂತರದಲ್ಲಿ ತೆಗೆಯಬೇಕು. ನಂತರ ಅವುಗಳನ್ನು ಮೇಲ್ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರಗಳನ್ನು ಸಮಪ್ರಮಾಣದಲ್ಲಿ ಬೆರೆಸಿದ ಮಿಶ್ರಣದಿಂದ ತುಂಬಬೇಕು. ಸಸಿ/ಕಸಿ ಗಿಡಗಳನ್ನು ತಲಾ ಒಂದರಂತೆ ಗುಣಿಗಳ ಮಧ್ಯಭಾಗದಲ್ಲಿ ನಾಟಿ ಮಾಡಿ, ಕೋಲಿನ ಆಸರೆಯನ್ನು ಒದಗಿಸಬೇಕು.

**ನಾಟಿ ನಂತರದ ಬೇಸಾಯ:** ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರಗಳನ್ನು ಎರಡು ಸಮ ಕಂತುಗಳಲ್ಲಿ ಕೊಡಬೇಕು. ಪಾತಿಗಳನ್ನು ಸ್ವಚ್ಛವಾಗಿಟ್ಟುಕೊಂಡು ಬೇಸಿಗೆಯಲ್ಲಿ ಪ್ರತಿ 12-15 ದಿನಗಳಿಗೊಮ್ಮೆ ನೀರು ಒದಗಿಸಬೇಕು. ಕೆಳಮಟ್ಟದಲ್ಲಿರುವ ಕವಲುಗಳನ್ನು ತೆಗೆಯಬೇಕು.

**ಕೊಯ್ಲು ಮತ್ತು ಇಳುವರಿ:** ಕಸಿ ಗಿಡಗಳು ನಾಟಿ ಮಾಡಿದ 4 ವರ್ಷಗಳ ನಂತರ ಹಣ್ಣು ಕೊಡಲು ಆರಂಭಿಸುತ್ತವೆ. ಸಿಂಗಪೂರ್ ತಳಿ ನಾಟಿ ಮಾಡಿದ ಎರಡೂವರೆ ವರ್ಷಗಳಲ್ಲಿಯೋ ಫಲ ನೀಡುತ್ತದೆ. ಪ್ರತಿ ವರ್ಷ, ಪ್ರತಿ ಗಿಡಕ್ಕೆ 50-250 ಹಣ್ಣು ಸಿಗುತ್ತದೆ. ಪ್ರತಿ ಎಕರೆಗೆ 16-20 ಟನ್ ಹಣ್ಣಿನ ಇಳುವರಿ ಪಡೆಯಬಹುದು.